# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ : ಬೆಸ್ಕಾಂ(BESCOM) ಸಂಸ್ಥೆಯಲ್ಲಿ Empanel ಆಗಿರುವ Hybrid Solar Inverter ಗಳನ್ನು Grid Interactive Hybrid Solar Roof Top Power plants ಅಳವಡಿಕೆ ಕಾರ್ಯಕ್ರಮದಲ್ಲಿ ಉಪಯೋಗಿಸಿಕೊಳ್ಳಲು ಗುತ್ತಿಗೆದಾರ ಸಂಸ್ಥೆಗಳಿಗೆ ಅನುಮತಿ ನೀಡುವ ಬಗ್ಗೆ.

ಓದಲಾಗಿದೆ :
1. ಅಧಿಸೂಚನೆ ಸಂ:RDPR/12/BGS/2020 ದಿನಾಂಕ:18-04-2020
2. ಅಧಿಸೂಚನೆ ಸಂ:RDPR/12/BGS/2020(2nd Stage) ದಿನಾಂಕ:20-07-2020
3. ಸಂ:KPRC/DD-4/BGS/22/2020 ದಿನಾಂಕ:22-10-2020
4. ಸಂ:KPRC/DD-4/BGS/22/2020 ದಿನಾಂಕ:22-12-2020
5. ಸರ್ಕಾರದ ಆದೇಶ ಸಂ: KPRC/DD-4/BGS/27/2021 ದಿನಾಂಕ:12.05.2021
6. ಸರ್ಕಾರದ ಆದೇಶ ಸಂ: KPRC/DD-4/214/2021 ದಿನಾಂಕ: 07.03.2022
7. ಸರ್ಕಾರದ ಆದೇಶ ಸಂ: KPRC/DD-4/30/2022 ದಿನಾಂಕ: 20.04.2022

ಪ್ರಸ್ತಾವನೆ:

ಓದಲಾದ(1) ಮತ್ತು (2) ಗಳಲ್ಲಿ 2020-21 ಮತ್ತು 2021-22 ನೇ ಸಾಲಿಗೆ ಸಂಬಂಧಿಸಿದಂತೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಅಧೀನದಲ್ಲಿ ಬರುವ ಇಲಾಖಾ ಕಛೇರಿಗಳು, ಜಿಲ್ಲಾ ಪಂಚಾಯತ್ ಹಾಗೂ ಜಿಲ್ಲಾ ಪಂಚಾಯತ್ ಅಧೀನದಲ್ಲಿ ಬರುವ ಕಛೇರಿಗಳು, ತಾಲ್ಲೂಕು ಪಂಚಾಯತಿ ಮತ್ತು ಗ್ರಾಮ ಪಂಚಾಯತಿಗಳ ಕಟ್ಟಡಗಳಲ್ಲಿ Grid Interactive Hybrid Solar Roof Top Power plants ಗಳನ್ನು ಅಳವಡಿಸಲು ಕೆ.ಟಿ.ಪಿ.ಪಿ ನಿಯಮಗಳನ್ವಯ ಎರಡು ಹಂತಗಳಲ್ಲಿ ಇ-ಟೆಂಡರ್ ಪ್ರಕ್ರಿಯೆಗಳನ್ನು ಪೂರ್ಣಗೊಳಿಸಿ ಟೆಂಡರ್ ನೆಗೋಷಿಯೇಷನ್ ಕಮಿಟಿ ಹಾಗೂ ಟೆಂಡರ್ ಅಂಗೀಕಾರ ಸಮಿತಿಯ ಅನುಮೋದನೆಯನ್ವಯ 05 ಅರ್ಹ ಗುತ್ತಿಗೆದಾರರನ್ನು ಆಯ್ಕೆ ಮಾಡಿ, ಓದಲಾದ(3) ರಂತೆ Letter of Acceptance(LoA) ನೀಡಲಾಗಿದ್ದು, ಓದಲಾದ(4) ರಂತೆ ಕಾರ್ಯಕ್ರಮದ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಮಾರ್ಗಸೂಚಿಗಳನ್ನು ಹೊರಡಿಸಲಾಗಿರುತ್ತದೆ.

ಮುಂದುವರೆದು, ಸೋಲಾರ್ ವಿದ್ಯುತ್ ಘಟಕಗಳಿಗೆ ಸಂಬಂಧಿಸಿದ ಉಪಕರಣಗಳ ಮೇಲಿನ ಜಿ.ಎಸ್.ಟಿ ದರಗಳು ಶೇ.5 ರಿಂದ ಶೇ.12 ಕ್ಕೆ ಪರಿಷ್ಕರಣೆಯಾದ ಕಾರಣ, ಹೆಚ್ಚುವರಿ ತೆರಿಗೆ ಮೊತ್ತವನ್ನು ಸೇರಿಸಿ ಬಿಲ್ಲನ್ನು ಪಾವತಿಸುವ ನಿಟ್ಟಿನಲ್ಲಿ ದಿನಾಂಕ:01.10.2021 ರಿಂದ ಪೂರ್ವಾನ್ವಯವಾಗುವಂತೆ Grid Interactive Hybrid Solar Roof Top Power plants ಗಳ ಅಳವಡಿಕೆಯ ಬಾಬ್ತು ಸಾಮರ್ಥ್ಯವಾರು ಘಟಕಗಳ ಅಂತಿಮ ದರಗಳನ್ನು ಓದಲಾದ(6) ರಂತೆ ಪರಿಷ್ಕರಿಸಿ ಆದೇಶಿಸಲಾಗಿದ್ದು, ಯೋಜನೆಯ ಸಮರ್ಪಕ ಅನುಷ್ಠಾನದ ಹಿತದೃಷ್ಟಿಯಿಂದ, ಓದಲಾದ(7) ರ ಆದೇಶದಲ್ಲಿ Grid Interactive Hybrid Solar Roof Top Power plants ಗಳ ಅಳವಡಿಕೆಯ ಗುತ್ತಿಗೆಯ ಅವಧಿಯನ್ನು ದಿನಾಂಕ: 22.10.2024 ರವರೆಗೆ ವಿಸ್ತರಿಸಲಾಗಿರುತ್ತದೆ.

ಓದಲಾದ (5) ರ ಆದೇಶವನ್ನು ಹೊರಡಿಸಿದ ಸಂದರ್ಭದಲ್ಲಿ ಸರ್ಕಾರಿ ಸ್ವಾಮ್ಯದ ಬೆಸ್ಕಾಂ ಸಂಸ್ಥೆಯಲ್ಲಿ Empanel ಆಗಿದ್ದ ನಾಲ್ಕು ವಿವಿಧ ಸಂಸ್ಥೆಗಳ ತಯಾರಿಕಾ Hybrid Solar Inverter ಗಳನ್ನು, ಮೊದಲನೆ ಹಂತದ ಟೆಂಡರ್ ನಲ್ಲಿ ಯಶಸ್ವಿಯಾಗಿರುವ ಗುತ್ತಿಗೆದಾರ ಸಂಸ್ಥೆಗಳು ಉಪಯೋಗಿಸಿಕೊಳ್ಳಲು ಅನುಮತಿ ನೀಡಿ ಆದೇಶಿಸಲಾಗಿತ್ತು.

ಸೋಲಾರ್ ರೂಫ್ ಟಾಪ್ ಅಳವಡಿಕೆ ಕಾರ್ಯಕ್ರಮದಲ್ಲಿ ತಮ್ಮ ಸಂಸ್ಥೆಯ ತಯಾರಿಕಾ Inverter ಗಳನ್ನು ಸಹ ಬಳಸಿಕೊಳ್ಳಲು ಅನುಮತಿ ನೀಡುವಂತೆ ಕೋರಿ, ಪ್ರಸ್ತುತ ಬೆಸ್ಕಾಂ ನಲ್ಲಿ Empanel ಆಗಿರುವ ವಿವಿಧ Inverter ತಯಾರಿಕಾ ಸಂಸ್ಥೆಗಳ ಪೈಕಿ ಕೆಲವು ಸಂಸ್ಥೆಯವರು ಇಲಾಖೆಗೆ ಮನವಿಯನ್ನು ಸಲ್ಲಿಸಿರುತ್ತಾರೆ. ಸದರಿ ಸಂಸ್ಥೆಗಳ ಮನವಿಯನ್ನು ಪರಿಗಣಿಸಿ, ಮೊದಲನೆ ಹಂತದ ಟೆಂಡರ್ ನಲ್ಲಿ ಯಶಸ್ವಿಯಾಗಿರುವ 05 ಗುತ್ತಿಗೆದಾರ ಸಂಸ್ಥೆಗಳು ಉಪಯೋಗಿಸಿಕೊಳ್ಳಲು ಈಗಾಗಲೇ ಅನುಮೋದನೆ

ನೀಡಿರುವ Hybrid Solar Inverter ಗಳ ಜೊತೆಗೆ, ಬೆಸ್ಕಾಂ ನಲ್ಲಿ Empanel ಆಗಿದ್ದು ಚಾಲ್ತಿಯಲ್ಲಿರುವ ಇತರ ವಿವಿಧ ಸಂಸ್ಥೆಗಳ ತಯಾರಿಕಾ Hybrid Solar Inverter ಗಳನ್ನೂ ಸಹ ಬಳಸಿಕೊಳ್ಳಲು ಅನುಮತಿ ನೀಡಲು ಸರ್ಕಾರವು ತೀರ್ಮಾನಿಸಿದ್ದು, ಪ್ರಯುಕ್ತ ಈ ಆದೇಶ:

**ಸರ್ಕಾರದ ಆದೇಶ ಸಂ: ಕೆಪಿಆರ್‌ಸಿ/ಡಿಡಿ4/79/2022**
**ಬೆಂಗಳೂರು, ದಿನಾಂಕ: 17.06.2022**

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಮುಖೇನ ಅನುಷ್ಠಾನಗೊಳ್ಳುತ್ತಿರುವ Grid Interactive Hybrid Solar Roof Top Power plants ಗಳ ಅಳವಡಿಕೆ ಕಾರ್ಯಕ್ರಮಕ್ಕೆ ಸಂಬಂಧಿಸಿದಂತೆ, ಬೆಸ್ಕಾಂ ನಲ್ಲಿ Empanel ಆಗಿದ್ದು ಚಾಲ್ತಿಯಲ್ಲಿರುವ (Validity ಹೊಂದಿರುವ) ಯಾವುದೇ ಸಂಸ್ಥೆಗಳ ತಯಾರಿಕಾ Grid tied Hybrid Solar Inverter ಗಳನ್ನು ಓದಲಾದ (5) ರ ಆದೇಶದಲ್ಲಿ ವಿಧಿಸಲಾಗಿದ್ದ ಷರತ್ತುಗಳಿಗೊಳಪಟ್ಟು ಉಪಯೋಗಿಸಿಕೊಳ್ಳಲು, ಮೊದಲನೆ ಹಂತದ ಟೆಂಡರ್ ನಲ್ಲಿ ಯಶಸ್ವಿಯಾಗಿರುವ 05 ಗುತ್ತಿಗೆದಾರ ಸಂಸ್ಥೆಗಳಿಗೆ ಅನುಮತಿ ನೀಡಿ ಆದೇಶಿಸಿದೆ.

ನಿರ್ದೇಶಕರು(ಗ್ರಾ.ಮೂ.ಸೌ-2)
ಹಾಗೂ ಸರ್ಕಾರದ ಪದನಿಮಿತ್ತ ಜಂಟಿ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ಇವರಿಗೆ,

1. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್ ಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಅಗತ್ಯ ಕ್ರಮಕ್ಕಾಗಿ
2. ರಾಜ್ಯದ ಎಲ್ಲಾ ತಾಲ್ಲೂಕು ಪಂಚಾಯತ್ ಗಳ ಕಾರ್ಯನಿರ್ವಾಹಕ ಅಧಿಕಾರಿಗಳು ಹಾಗೂ ಎಲ್ಲಾ ಗ್ರಾಮ ಪಂಚಾಯತ್ ನ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳಿಗೆ ಅಗತ್ಯ ಕ್ರಮಕ್ಕಾಗಿ
3. M/s Powerone Microsystems, Pvt Ltd, Bangalore
4. M/s Nuetech solar systems Pvt Ltd, Bangalore
5. M/s Greensol renewable power Pvt Ltd, Bangalore
6. M/s Sri Savitr solar Pvt Ltd, Hyderabad
7. M/s Inkel Limited, Cochin
8. ಬೆಸ್ಕಾಂ ನಲ್ಲಿ Empanel ಆಗಿರುವ ಎಲ್ಲಾ Hybrid Solar Inverter ತಯಾರಿಕಾ ಸಂಸ್ಥೆಗಳಿಗೆ

ಪ್ರತಿಯನ್ನು ಮಾಹಿತಿಗಾಗಿ:

1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬೆಂಗಳೂರು, ಇವರ ಆಪ್ತ ಕಾರ್ಯದರ್ಶಿಗಳಿಗೆ
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು(ಪಂ.ರಾಜ್) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬೆಂಗಳೂರು, ಇವರ ಆಪ್ತ ಕಾರ್ಯದರ್ಶಿಗಳಿಗೆ
3. ಆಯುಕ್ತರು, ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬೆಂಗಳೂರು, ಇವರ ಆಪ್ತ ಸಹಾಯಕರಿಗೆ